ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಮ್ಮ ನಂಜುಂಡಸ್ವಾಮಿಯವರು ಹೇಳಿದರು. You are violating the Constitution ಎಂದು, ಅದಕ್ಕೆ 19 (ಎ) ಕಾನೂನಿಗೆ ವಿರುದ್ಧ ಇದೆ, ಕಾನ್ಸ್‌ಟಿಟ್ಯೂಷನ್‌ಗೆ ವಿರುದ್ಧ ಇದೆ ಎನ್ನತಕ್ಕಂಥ ವಾದವನ್ನು ಅವರು ಮಂಡಿಸಿದರು. ಅದರೂ ಕೂಡಾ ಇದುವರೆಗೂ ಇದು ಸ್ಟೈಕ್ ಡೌನ್ ಆಗಲಿಲ್ಲ. ಇನ್ನೂ ಇದೆ. ಇನ್ನೂ ಜೀವಂತ ಇದೆ. ನೋಡೋಣ. ಆಮೇಲೆ ಇದನ್ನು ಎಕ್ಸಾಮಿನೇಷನ್ ಮಾಡಿ ಮುಂದೆ ಅಂಥದ್ದು ಏನಾದರೂ ಸುಪ್ರೀಂಕೋರ್ಟ್‌ನಿಂದ ಏನಾದರೂ ಆದೇಶ ಬಂದರೆ ಪುನಃ ಪರಿಶೀಲನೆಯನ್ನು ಮಾಡೋಣ. ಸದ್ಯಕ್ಕೆ ಜೀವಂತ ಇದೆ. ಈಗ ತೊಂದರೆಗೆ ಈಡಾಗದಂಥ ದೃಷ್ಟಿಯಿಂದ ನಡೆದಿದೆ. ಇಷ್ಟು ಮಾತ್ರ ಹೇಳಿ ಎಲ್ಲವನ್ನೂ ಕೂಡಾ ಈಗಾಗಲೇ ನಾನು ಕೆಲವು ಸೂಚನೆಗಳನ್ನು ತೆಗೆದುಕೊಂಡಿದ್ದೇನೆ ಮತ್ತು ಕೆಲವು ವಿಷಯಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಕೌಜಲಗಿಯವರು, ದೇಶಪಾಂಡೆಯವರು ಯಾವ ಯಾವ ಸೆಕ್ಷನ್‌ಗಳಲ್ಲಿ ಪುನರ್‌ಪರಿಶೀಲಿಸಬೇಕು ಅಥವಾ ಅದರ ಬಗ್ಗೆ ಚಿಂತನೆಯನ್ನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಹೇಳಿದ್ದಾರೆ, ಅದನ್ನೂ ಕೂಡಾ ಕೆಲವು ಸೆಕ್ಷನ್‌ಗಳನ್ನು ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿ ಅದರಲ್ಲಿ ಯಾವ ರೀತಿಯಾದ ಕ್ರಮವನ್ನು ತೆಗೆದುಕೊಳ್ಳಬಹುದು ಅಥವಾ ಸಹಾಯವನ್ನು ಮಾಡಬಹುದು ಎಂಬುದನ್ನು ನೋಡುತ್ತೇನೆ. Hindu succession ಆಕ್ಟ್ ಪ್ರಕಾರ ತಾವು ಹೇಳಿದಿರಿ, ಪೇರೆಂಟ್ಸ್ ಅಂದರೆ ತಂದೆ ತಾಯಿಗಳ ಜಮೀನುಗಳು ಮುಂದೆ ಮಕ್ಕಳಿಗೇ ಆಗುವುದಿಲ್ಲ, ಅಂಥ ಒಂದು ಪರಿಸ್ಥಿತಿ ಇದೆ ಎನ್ನತಕ್ಕಂಥದ್ದನ್ನು ಹೇಳಿದಿರಿ, ಇನ್ನೊಂದು ಏನು ಹೇಳಿದಿರಿ; ಫ್ಯಾಮಿಲಿಗಳ ಬಗ್ಗೆ ಹೇಳಿದಿರಿ, ಜಾಯಿಂಟ್ ಫ್ಯಾಮಿಲಿ ಇದ್ದರೆ ಈ ಪ್ರಶ್ನೆ ಬರುವುದಿಲ್ಲ. ಫ್ಯಾಮಿಲಿ ಡೆಫನೀಷನನ್ನು ನಾವು ಕೊಟ್ಟಿದ್ದೇವೆ - Husband, wife and 2 minor children ಎನ್ನತಕ್ಕಂಥದ್ದು ಇದರಲ್ಲಿ ಇದೆ. ಅದಕ್ಕೆ ಪುನಃ ಫ್ಯಾಮಿಲಿಗೆ ಹೊಸ ಡೆಫನೀಷನನ್ನು ಕೊಡತಕ್ಕಂಥ ಅವಶ್ಯಕತೆ ಇಲ್ಲ. ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಫ್ಯಾಮಿಲಿ ಡೆಫನೀಷನ್ ಏನು ಇದೆ, ಅದರ ಪ್ರಕಾರ ಇನ್‌ಕಂ ಕೂಡಾ ಕೌಂಟ್ ಆಗಿದೆ. ಅದಕ್ಕಾಗಿ ಇಲ್ಲಿ ಎಂಟೈರ್ ಜಾಯಿಂಟ್ ಫ್ಯಾಮಿಲಿಯಲ್ಲಿ ಕೌಂಟ್ ಆಗತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ಈಗ ಸದ್ಯಕ್ಕೆ ಇರತಕ್ಕದ್ದು ಅನೇಕ ರೈತರಿಗೆ ಅನುಕೂಲವಾಗತಕ್ಕ ಒಂದು ತಿದ್ದುಪಡಿ ಇದೆ. ವಿಶೇಷವಾಗಿ ನಮ್ಮ ಸೈನಿಕರುಗಳಿಗೆ ಸಹಾಯ ಮಾಡತಕ್ಕದ್ದು ಇದರಲ್ಲಿ ಇದೆ. ಇದೆಲ್ಲವನ್ನು ತಾವು ಒಪ್ಪಿದ್ದೀರಿ. ಈಗಾಗಲೇ ಒಮ್ಮತದಿಂದ ಒಪ್ಪಿದ್ದೀರಿ ಅದರ ಬಗ್ಗೆ ಮತ್ತೊಮ್ಮೆ ಕೇಳಿಕೊಳ್ಳಬೇಕಾಗಿಲ್ಲ. ಅದರೂ ಕೂಡ ನಾನು ಅಭಿನಂದಿಸುತ್ತೇನೆ. ಏಕೆಂದರೆ ನಾಲ್ಕು ತಿದ್ದುಪಡಿಗಳಿಗೆ ಎಲ್ಲರೂ ಒಮ್ಮತದಿಂದ ಬೆಂಬಲವನ್ನು ಕೊಟ್ಟಿದ್ದಕ್ಕಾಗಿ ತಮ್ಮೆಲ್ಲರನ್ನೂ ಅಭಿನಂದಿಸಿ ಪುನಃ ಇದನ್ನು ಒಮ್ಮತದಿಂದ ಪಾಸ್ ಮಾಡಬೇಕೆಂದು ತಮಗೆ ಪುನಃ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

1990ನೇ ಇಸವಿಯ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕ

ಉಪಾಧ್ಯಕ್ಷರು : "ಪ್ರಸ್ತಾವ ಏನೆಂದರೆ 1990ನೇ ಇಸವಿಯ ಕರ್ನಾಟಕ ಭೂ ಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

"ಪ್ರಸ್ತಾವ ಅಂಗೀಕರಿಸಲ್ಪಟ್ಟಿತು"

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 13ರ ವರೆಗೆ.

ಉಪಾಧ್ಯಕ್ಷಣೆಯವರು : "ಖಂಡ 2ರಿಂದ 13ರ ವರೆಗೆ ಎಂದೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 13ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

14ನೇ ಖಂಡಕ್ಕೆ ಕಂದಾಯ ಸಚಿವರು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ತಿದ್ದುಪಡಿಯನ್ನು ಮಂಡಿಸಬೇಕು.

CLAUSE NO.14

SRI. M. MALLIKARJUNA KHARGE ; I beg to move:

"For Clause 14, the following shall be substituted, namely:"

"14. Amendment of Karnataka Act No.18 of 1990:- In the Karnataka Land Reforms (Amendment) Act, 1990, (Karnataka Act.18 of 1990), in Section 17 for the words " before the expiry of ninety days from the commencement of the Karnataka Land Reforms (Amendment) Act,1990, whose appeal was pending immediately before such commencement" the words "on or before Thirty First Day of March, 1991 whose appeal was pending immediately before the commencement of the Karnataka Land Reforms (Amendment) Act, 1990, shall be and shall be deemed always to have been substituted."

The question was proposed.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಮಾನ್ಯ ಉಪಾಧ್ಯಕ್ಷಿಣೆಯವರೆ, ನಾನು ಈಗಾಗಲೆ ಈ ಬಗ್ಗೆ ವಿವರಿಸಿದ್ದೇನೆ. 31-3-90ರ ವರೆಗೆ ಏನು ಡಿಸ್ಟ್ರಿಕ್ಟ್ ಅಪೆಲೆಟ್ ಕೋರ್ಟಿನಲ್ಲಿ ಕೇಸಸ್ ಇದ್ದವು, ಅಲ್ಲಿರತಕ್ಕ ಟೆನೆಂಟ್ ಆಗಲಿ, ಲ್ಯಾಂಡ್ ಲಾರ್ಡ್ ಆಗಲಿ, ಹೈಕೋರ್ಟಿನಲ್ಲಿ ಅವರಿಗೆ ಅಪೀಲ್ ಫೈಲ್ ಮಾಡಲಿಕ್ಕೆ ಟೈಮ್ ಎಕ್ಸ್‌ಟೆನ್‌ಷನ್ ಕೊಟ್ಟಿದ್ದೇವೆ. ಇದಕ್ಕೆ ಎಲ್ಲರೂ ಕೂಡ ಈಗಾಗಲೇ ಒಪ್ಪಿಗೆ ಕೊಟ್ಟಿದ್ದಾರೆ. ತಾವು ಇದನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MADAM DEPUTY SPEAKER : The question is :

"That for Clause 14, the following shall be substitude, namely:-"

14. Amendment of Karnataka Act No.18 of 1990:- In the Karnataka Land Reforms (Amendment)Act, 1990, (Karnataka Act, 18 of 1990), in section 17 for the words "before the expiry of ninety days from the commencement of the Karnataka Land Reforms (Amendment) Act,1990, whose appeal was pending immediately before such commencement" the words "on or before Thirty First Day of March, 1991 whose appeal was

pending immediately before the commencement of the Karnataka Land Reforms (Amendment) Act, 1990, shall be and shall be deemed always to have been substituted."

The amendment was adopted.

ಉಪಾಧ್ಯಕ್ಷೆಯವರು : ಪ್ರಸ್ತಾವ ಏನೆಂದರೆ ತಿದ್ದುಪಡಿಯಾದ 14ನೇ ಖಂಡವು ವಿಧೇಯಕದ ಅಂಗವಾಗಿರುತ್ತದೆ.

(ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ತಿದ್ದುಪಡಿಯಾದ 14ನೇ ಖಂಡವು ವಿಧೇಯಕದ ಅಂಗವಾಯಿತು.)

ಖಂಡ 1 ಇತ್ಯಾದಿ

ಉಪಾದ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂಕ್ತ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

"ಪ್ರಸ್ತಾವವನ್ನು ಅಂಗೀಕರಿಸಲಾಯಿತು"

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : (ಕಂದಾಯ ಮಂತ್ರಿಗಳು) 1990ನೇ ಇಸವಿಯ ಕರ್ನಾಟಕ ಭೂ ಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1990ನೇ ಇಸವಿಯ ಕರ್ನಾಟಕ ಭೂ ಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.)

1990ನೇ ಇಸವಿಯ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು) ಮಾನ್ಯ ಉಪಾಧ್ಯಕ್ಷರೆ, 1990ನೇ ಇಸವಿಯ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದೂ ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷೆಯವರೆ, ಈ ಬಿಲ್ಲಿನಲ್ಲಿ ಎರಡು ಅಂಶಗಳು ಸೇರಿವೆ. ಒಂದು ಮಾಜಿ ಶಾಸಕರಿಗೆ ಸಂಬಂಧಪಟ್ಟಂಥಾದ್ದು. ಈಗ ಒಂದು ತಿದ್ದುಪಡಿ ಕೂಡ ಈ ಬಗ್ಗೆ ಸೂಚಿಸಿದ್ದೇವೆ. ಅದೇನೆಂದರೆ 750 ರೂಪಾಯಿ ಫಾರ್ ಒನ್ ಟರ್ಮ್ ಇತ್ತು. ಅದು ಒನ್ ಟರ್ಮ್ ಆಗಲಿ,